(ಇಂದು ದಿನಾಂಕ: ***11/08/2026*** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**<u>ಪಾಟೀ ಸವಾಲು 1 ಮತ್ತು 5 ನೇ ಎದುರುದಾರರ ಪರ ಶ್ರೀ ಎಸ್.ಎ.ಎಚ್. ವಕೀಲರಿಂದಃ–</u>**

10. ನಾನು 1990 ರಲ್ಲಿ ಎದುರುದಾರರ ಸಂಸ್ಥೆಯಲ್ಲಿ ಸಹ ಶಿಕ್ಷಕನೆಂದು ಕೆಲಸಕ್ಕೆ ಸೇರಿದ್ದೆ. ಆಗ ಶಾಲೆಗೆ ಇನ್ನೂ ಅನುದಾನ ದೊರೆತಿರಲಿಲ್ಲ. 2009-10 ರಲ್ಲಿ ಶಾಲೆಗೆ ಅನುದಾನ ದೊರೆಯಿತು. 1999 ರಿಂದ ಅನುದಾನ ಸಿಗುವವರೆಗೆ ನಾನು ಮುಖ್ಯೋಪಾಧ್ಯಾಯನಾಗಿ ಕೆಲಸ ಮಾಡಿದ್ದೇನೆ. ನಾನು ದೇಣಿಗೆ ಕೊಟ್ಟಿಲ್ಲವೆಂದು ನನ್ನನ್ನು ಕೆಲಸದಿಂದ ತೆಗೆದರು. ನನ್ನ ನೇಮಕವಾದ ಕಾಲಕ್ಕೂ ಸಹ ದೇಣಿಗೆ ಕೇಳಿದ್ದರು. ಸ್ವಲ್ಪ ದೇಣಿಗೆ ಕೊಟ್ಟೆ. ದೇಣಿಗೆ ಕೊಟ್ಟ ದಾಖಲೆ ಇಲ್ಲ. ಆಗ ಸಂಸ್ಥೆಯ ಆಡಳಿತ ಬೇರೆಯವರದಾಗಿತ್ತು. ನನ್ನ ನೇಮಕದ ಕಾಲಕ್ಕೆ ದೇಣಿಗೆ ಕೊಟ್ಟ ಬಗ್ಗೆ ಮೇಲ್ಮನವಿ ಯಲ್ಲಿ ಬರೆದಿಲ್ಲ.

11. ರೂ.10 ಲಕ್ಷ ದೇಣಿಗೆಯನ್ನು ಆಡಳಿತ ಮಂಡಳಿಯವರು ಕೇಳಿದ್ದರು. ಸಂಸ್ಥೆಯ ಯಾವುದೇ ವ್ಯಕ್ತಿ ದೇಣಿಗೆ ಕೇಳಿಲ್ಲ ಎನ್ನುವುದು ಸುಳ್ಳು. ನನ್ನ ಮೇಲೆ ಆಪಾದನೆ ಇದ್ದುದರಿಂದ ನನ್ನನ್ನು ಕೆಲಸದಿಂದ ತೆಗೆದುಹಾಕಲಾಗಿದೆ ಎನ್ನುವುದು ಸುಳ್ಳು. ನನಗೆ ಆಪಾದನೆ ಪಟ್ಟಿ ಜಾರಿ ಯಾಗಿತ್ತು ಎನ್ನುವುದು ಸುಳ್ಳು. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು. ನನ್ನನ್ನು ವಜಾ ಮಾಡಿದ ನಂತರ ನಾನು ಸಮಿತಿಯ ಅಕ್ಬರಖಾನ ಕಿರಾಣಿ ಎನ್ನುವ ಉಪಾಧ್ಯಕ್ಷ, ಆಯುಬಖಾನ ಕೆಂಚಿಕೊಪ್ಪ, ಖಲೀಮುಲ್ಲಾ ಸೋಮಲಾಪುರ ಎನ್ನುವವರನ್ನು ಭೇಟಿ ಮಾಡಿದ್ದೆ.

12. ಈ ಮೇಲೆ ಹೇಳಿದ ವ್ಯಕ್ತಿಗಳು ಹಿರೇಕೆರೂರು ನ್ಯಾಯಾಲಯದಲ್ಲಿ ಎದುರುದಾರ ಸಂಸ್ಥೆಯ ಅಧ್ಯಕ್ಷರ ಮೇಲೆ ದಾವೆ ಹೂಡಿದ್ದಾರೆ ಎನ್ನುವುದು ನಿಜ. ಸದರಿ ದಾವೆಯ ಪ್ರತಿವಾದಿಗಳು ಎದುರುದಾರ ಶಿಕ್ಷಣ ಸಂಸ್ಥೆಯ ಸದಸ್ಯರು ಎನ್ನುವುದು ನಿಜ. ಅಕ್ಬರಖಾನ ಕಿರಾಣಿ, ಆಯುಬಖಾನ ಕೆಂಚಿಕೊಪ್ಪ ಮತ್ತು ಖಲೀಮುಲ್ಲಾ ಸೋಮಲಾಪುರ ಎನ್ನುವವರು ಸಂಸ್ಥೆಗೆ ರಾಜೀನಾಮೆ ಕೊಟ್ಟು ಹೋಗಿದ್ದಾರೆ ಎನ್ನುವುದು ಗೊತ್ತಿಲ್ಲ. ಸಂಸ್ಥೆಯ ಕಾರ್ಯದರ್ಶಿಗಳನ್ನು ಪಕ್ಷಕಾರನನ್ನಾಗಿ ಸೇರಿಸಿಲ್ಲ ಎನ್ನುವುದು ನಿಜ. ನನ್ನ ವಜಾ ಆದೇಶವನ್ನು ಕಾರ್ಯದರ್ಶಿಯವರು ನನಗೆ ಪೂರೈಸಿದ್ದಾರೆ ಎನ್ನುವುದು ನಿಜ. ಆಡಳಿತ ಮಂಡಳಿ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದರಿಂದ ಕಾರ್ಯದರ್ಶಿಯನ್ನು ಸೇರಿಸಿಲ್ಲ.

13. 2010 ರ ಮೇ ತಿಂಗಳಿನಲ್ಲಿ ಬೇಸಿಗೆ ರಜೆ ಇತ್ತು ಎನ್ನುವುದು ನಿಜ. ದಿನಾಂಕ:28/05/2010 ರಂದು ನಾನು ಶಾಲೆಗೆ ಹಾಜರಾದೆ ಎನ್ನುವುದು ನಿಜ. ನಂತರ 2 ದಿನ ಸಾಂದರ್ಭಿಕ ರಜೆ ಕೋರಿದೆ ಎನ್ನುವುದು ನಿಜ. ದಿನಾಂಕ:01/06/2010 ರಿಂದ 6 ತಿಂಗಳ ಕಾಲ ನಾನು ಕರ್ತವ್ಯಕ್ಕೆ ಹಾಜರಾಗಿಲ್ಲ ಎನ್ನುವುದು ಸುಳ್ಳು. ನನ್ನ ಆರೋಗ್ಯ ಸರಿಯಿಲ್ಲದ್ದರಿಂದ ರಜೆ

ಮುಂದುವರೆಸಲು ಕೋರಿದ್ದೆ. ನನ್ನ ಅನಾರೋಗ್ಯದ ನಿಮಿತ್ತ ರಜೆ ಇದ್ದ ಬಗ್ಗೆ ಡಿಡಿಪಿಐ ಮತ್ತು ಬಿಇಓ ರವರಿಗೆ ನಾನು ತಿಳಿಸಿಲ್ಲ. ಸದರಿ ವಿಷಯವನ್ನು ನಾನು ಸಂಸ್ಥೆಗೆ ತಿಳಿಸಿಲ್ಲ ಎನ್ನುವುದು ಸುಳ್ಳು. ಏಕೆಂದರೆ ಮುಖ್ಯೋಪಾಧ್ಯಾಯರಿಗೆ ತಿಳಿಸಿದ್ದೆ. ಒಂದು ತಿಂಗಳ ಕಾಲ ರಜೆ ಮುಂದುವರೆಸಲು ಕೋರಿ ಜೂನ್ ತಿಂಗಳಿನಲ್ಲಿ ಅರ್ಜಿ ಸಲ್ಲಿಸಿದ್ದೆ. ನವೆಂಬರ್ ತಿಂಗಳು ಮುಗಿಯುವವರೆಗೆ ನಾನು ಅನಧೀಕೃತ ಗೈರುಹಾಜರು ಉಳಿದಿದ್ದೆ ಎನ್ನುವುದು ಸುಳ್ಳು. ಎಸ್.ಎ.ಪ್ಯಾಟಿ ಎನ್ನುವವರು ಆಗಿನ ಮುಖ್ಯೋಪಾಧ್ಯಾಯರಾಗಿದ್ದರು. ನನ್ನ ಅನಧೀಕೃತ ಗೈರು ಹಾಜರಿಯಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಯಿತು ಎನ್ನುವುದು ಸುಳ್ಳು.

14. ದಿನಾಂಕ:29/05/2010 ರಿಂದ ದಿನಾಂಕ:29/06/2010 ರವರೆಗೆ ನಾನು ರಜೆ ಕೋರಿ ಅರ್ಜಿ ಸಲ್ಲಿಸಿ ಮಂಜೂರಿ ಆಗುವ ಮುಂಚೆ ಹೋದೆ ಎಂದರೆ ನನ್ನ ಮಗನ ಮೂಲಕ ಅರ್ಜಿ ಕಳಿಸಿದ್ದೇನೆ. ದಿನಾಂಕ:29/06/2010 ರ ನಂತರ ನಾನು ರಜೆ ಅರ್ಜಿ ಸಲ್ಲಿಸಿಲ್ಲ. ಜುಲೈ 2010 ರಲ್ಲಿ ನಾನು ಕರ್ತವ್ಯಕ್ಕೆ ಹಾಜರಾಗಿದ್ದೇನೆ.

(ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

***(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)***

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.